

بسم الله الرّحمٰن الرّحيم

# ಇಸ್ತಿಹಾರಾತ್ ಮತ್ತು ಕಿರು ಲೇಖನಗಳ ಮೂಲಕ ತಬ್ಲೀಗ್ – ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತೋರಿಸಿ ಕೊಟ್ಟ ಧರ್ಮ ಪ್ರಚಾರದ ಯಶಸ್ವಿ ಕಾರ್ಯ ವಿಧಾನ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **27-03-2015** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಆಗಮನದ ಉದ್ದೇಶವಾಗಿ ಐದು ಶಾಖೆಗಳ ಬಗ್ಗೆ ಹೇಳಿದ್ದಾರೆ. ಅದರಲ್ಲಿ ಒಂದು ಶಾಖೆ ವಿಜ್ಞಾಪನೆಗಳ ಪ್ರಕಟಣೆಯಾಗಿದೆ. ಅಂದರೆ ತಬ್ಲೀಗ್ ಮತ್ತು ನ್ಯಾಯ ಪೂರ್ತೀಕರಣಕ್ಕೋಸ್ಕರ ವಿಜ್ಞಾಪನೆಗಳನ್ನು ಪ್ರಕಟಿಸುವುದು. ಒಂದು ಸ್ಥಳದಲ್ಲಿ ಅವರು ಹೀಗೆ ಹೇಳುತ್ತಾರೆ: "ನನ್ನ ಸತ್ಯದ ಸಾಕ್ಷ್ಯಾಧಾರಗಳನ್ನು ಕಂಡುಕೊಳ್ಳಲು ವಿರೋಧಿಗಳನ್ನು ಆಹ್ವಾನಿಸಿ ನಲ್ವತ್ತು ಕಿರುಲೇಖನಗಳನ್ನು ಪ್ರಕಟಿಸಲು ಇಂದು ನಾನು ನಿರ್ಧರಿಸಿದೆನು. ಯಾವ ಉದ್ದೇಶವನ್ನು ಈಡೇರಿಸಲಿಕ್ಕಾಗಿ ಏಕ ದೇವನು ನನ್ನನ್ನು ಕಳುಹಿಸಿರುವನೋ ಆ ಉದ್ದೇಶವನ್ನು ನಾನು ಈಡೇರಿಸಿರುವೆನೆಂದು ಖಿಯಾಮತ್ ದಿನದಂದು ಸಾಬೀತು ಪಡಿಸಲಿಕ್ಕಾಗಿ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಕೇವಲ ಕೆಲವು ಕಿರುಲೇಖನಗಳನ್ನು ಮಾತ್ರ ಪ್ರಕಟಿಸಿದ್ದಲ್ಲ. ಅಥವಾ ಅವರು ಕೇವಲ ಒಂದು ಸಂದರ್ಭದಲ್ಲಿ ಮಾತ್ರ ಕಿರುಲೇಖನಗಳನ್ನು ಪ್ರಕಟಿಸಿದ್ದಲ್ಲ. ನಾವು ಪರಾಂಬರಿಸಿ ನೋಡುವುದಾದರೆ ತನ್ನ ವಾದಕ್ಕಿಂತ ಮೊದಲಿನ ಕಾಲದಿಂದ ಹಿಡಿದು, ತನ್ನ ಮರಣದ ತನಕ ಅವರು ಅಸಂಖ್ಯಾತ ಕಿರುಲೇಖನಗಳನ್ನು ಪ್ರಕಟಿಸಿರುವರು. ಈ ಪ್ರಕಟಣೆಗಳೆಲ್ಲವೂ ಧಾರ್ಮಿಕ ಲೋಕದ ಖಜಾನೆಗಳಾಗಿವೆ. ಮುಸ್ಲಿಮರನ್ನೂ ಕ್ರೈಸ್ತರನ್ನೂ ಇತರ ಧರ್ಮದ ಜನರನ್ನೂ ನಾಶದಿಂದ ರಕ್ಷಿಸಬೇಕೆಂಬ ಹೃತ್ಪೂರ್ವಕವಾದ ನೋವು ಅವರಿಗಿತ್ತು. ಅವರು ಒಬ್ಬಂಟಿಗರಾಗಿ ಈ ಕೆಲಸ ಮಾಡುತ್ತಿದ್ದರು. ಅದಕ್ಕೋಸ್ಕರ ಕಠಿಣವಾಗಿ ಅಧ್ವಾನಿಸುತ್ತಿದ್ದರು. ಅವರು ದೊಡ್ಡ ದೊಡ್ಡ ಗ್ರಂಥಗಳನ್ನು ಸಹ ರಚಿಸಿದ್ದಾರೆ. ಅವುಗಳ ಹೊರತಾಗಿಯೂ ಅವರಿಗೆ ಸೃಷ್ಟಿಗಳ ಬಗ್ಗೆ ಇದ್ದ ಸಹಾನುಭೂತಿ ಅವರ ಈ ಚಿಕ್ಕ ಚಿಕ್ಕ ವಿಜ್ಞಾಪನೆಗಳಲ್ಲಿಯೂ ಪ್ರಕಟವಾಗುತ್ತಿವೆ. ಲೋಕವನ್ನು ಸುಧಾರಣೆ ಮಾಡಬೇಕೆಂಬ ನೋವು ಅವರಲ್ಲಿ ಇದ್ದುದು ಸ್ಪಷ್ಟವಾಗುತ್ತಿದೆ. ಲೋಕವನ್ನು ಸುಧಾರಣೆ ಮಾಡಬೇಕೆಂಬ ಅವರ ಈ ನೋವನ್ನು ಹೊಂದುವುದು ಮತ್ತು ಮುಂದಕ್ಕೆ ಕೆಲಸ ಮಾಡಿಕೊಂಡು ಹೋಗಬೇಕಾದುದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತಿನ ಪ್ರತಿಯೊಬ್ಬ ವ್ಯಕ್ತಿಯ ಕಡ್ಡಾಯ ಕರ್ತವ್ಯವಾಗಿದೆ. ಆದುದರಿಂದ ನಾವು ಈ ವಿಷಯದ ಬಗ್ಗೆ ಯಾವಾಗಲೂ ಗಮನ ಹರಿಸುತ್ತಾ ಇರಬೇಕಾಗಿದೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಈ ನೋವು ಮತ್ತು ಅಸಾಧಾರಣವಾದ ಕಷ್ಟಪಡುವಿಕೆಯ ಬಗ್ಗೆ ಒಂದು ಸ್ಥಳದಲ್ಲಿ ಹೀಗೆ ಹೇಳುತ್ತಾರೆ:

"ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉದಾಹರಣೆ ನಮ್ಮ ಮುಂದಿದೆ. ಅವರು ರೋಗಿಯಾಗಿದ್ದಾಗಲೂ ರಾತ್ರಿ ಹಗಲು ದುಡಿಯುತ್ತಿದ್ದರು. ಒಂದು ಕಿರುಲೇಖನ ಪ್ರಕಟಿಸಿದ ಕೂಡಲೇ ಇನ್ನೊಂದನ್ನು ಪ್ರಕಟಿಸುತ್ತಿದ್ದರು. ಜನರು ಅವರ ಕೆಲಸವನ್ನು ನೋಡಿ ಆಶ್ಚರ್ಯಚಕಿತರಾಗುತ್ತಿದ್ದರು. ಒಂದು ಕಿರುಲೇಖನ ಪ್ರಕಟಿಸಿ ಅದರ ಪ್ರಭಾವ ಕಡಿಮೆ ಆಗುವ ಮೊದಲೇ, ಶತ್ರುಗಳ ವಿರೋಧ ಕಡಿಮೆಯಾಗುವ ಮೊದಲೇ ಇನ್ನೊಂದು ಕಿರುಲೇಖನ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪ್ರಕಟಿಸುತ್ತಿದ್ದರು. ಅಂತಹ ಸಂದರ್ಭಗಳಲ್ಲಿ ಕೆಲವರು ಹೇಳುತ್ತಿದ್ದರು: ಹೀಗೆ ಒಂದರ ಮೇಲೆ ಇನ್ನೊಂದರಂತೆ ವಿಜ್ಞಾಪನೆಗಳನ್ನು ನಿರಂತರ ಪ್ರಕಟಿಸುವುದರಿಂದ ಜನರ ಮೇಲೆ ಕೆಟ್ಟ ಪ್ರಭಾವ ಬೀರಬಹುದು ಎಂದು. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಈ ಜನರ ಮಾತುಗಳನ್ನು ಅಲ್ಲಗಳೆಯುತ್ತಾ ಹೀಗೆ ಹೇಳುತ್ತಿದ್ದರು: ಕಬ್ಬಿಣವನ್ನು ಬೆಂಕಿಯಲ್ಲಿ ಬೆಂದು ಬಿಸಿಯಾಗಿರುವಾಗಲೇ ಸುತ್ತಿಗೆಯಿಂದ ಹೊಡೆಯಬೇಕಾಗಿದೆ ಎಂದು. ಜನರಲ್ಲಿ ಉತ್ಸಾಹ ಸ್ವಲ್ಪ ಕಡಿಮೆಯಾದ ಕೂಡಲೆ ಇನ್ನೊಂದು ಕಿರುಲೇಖನ ಪ್ರಕಟಿಸುತ್ತಿದ್ದರು. ಆಗ ವಿರೋಧದ ಅಲೆ ಮತ್ತೆ ಬುಗಿಲೇಳುತ್ತಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರಾತ್ರಿ ಹಗಲು ಈ ರೀತಿ ಕೆಲಸ ಮಾಡಿದರು. ವಿಜಯದ ಮಾರ್ಗ ಸಹ ಇದೇ ಆಗಿದೆ."

ನಾವು ಸಹ ಈ ಮಾರ್ಗ ಅವಲಂಭಿಸಿದರೆ ಮಾತ್ರವೇ ಜಯಶಾಲಿಗಳಾಗುವೆವು. ವಿರೋಧದ ಅಲೆ ಕಡಿಮೆಯಾಗಲಿ ಎಂದು ಯೋಚಿಸಬಾರದು. ವಿರೋಧ ನಡೆಯುತ್ತಾ ಇರಲಿ ಅದರೊಂದಿಗೆ ನಮ್ಮ ಪ್ರಕಟಣೆಗಳು ಸಹ ಪ್ರಸಾರಗೊಳ್ಳಬೇಕು. ಆಗ ಅದರ ಪ್ರಭಾವ ಉಂಟಾಗುತ್ತದೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಕಿರುಲೇಖನಗಳ ಪ್ರಕಟಣೆ ಮೂಲಕ ತಬ್ಲೀಗ್ ಮಾಡುತ್ತಿದ್ದರು. ಆ ಕಿರುಲೇಖನಗಳು ಎರಡು ಅಥವಾ ನಾಲ್ಕು ಪುಟಗಳದ್ದಾಗಿರುತ್ತಿದ್ದುವು. ಅವುಗಳಿಂದ ದೇಶದಲ್ಲಿ ಕೋಲಾಹಲ ಸಂಭವಿಸುತ್ತಿತ್ತು. ಅವುಗಳನ್ನು ಹೆಚ್ಚು ಸಂಖ್ಯೆಯಲ್ಲಿ ಪ್ರಕಟಿಸಲಾಗುತ್ತಿತ್ತು."

ಮೂರು ನಾಲ್ಕು ವರ್ಷಗಳ ಹಿಂದೆ ನಾನು ಜಮಾಅತಿನೊಡನೆ ಹೇಳಿದ್ದೆ ಒಂದು ಹಾಳೆ ಅಥವಾ ಎರಡು ಹಾಳೆಗಳ ಕಿರುಲೇಖನಗಳನ್ನು ಪ್ರಕಟಿಸಿ ತಬ್ಲೀಗ್ ಮಾಡಿರಿ ಎಂದು. ಅಂತಹ ಲಕ್ಷಗಟ್ಟಲೆ ಪ್ರತಿಗಳನ್ನು ಮುದ್ರಿಸಬೇಕೆಂದು ನಾನು ನಿಗದಿ ಪಡಿಸಿದ್ದೆ. ಅದರ ಮೂಲಕ ಇಸ್ಲಾಮಿನ ಸುಂದರ

ಉಪದೇಶಗಳು ಲೋಕಕ್ಕೆ ತಿಳಿಯಲಿ. ಇಸ್ಲಾಮ್ ವಾಸ್ತವಿಕವಾಗಿ ಏನು ಉಪದೇಶಿಸುತ್ತಿದೆ ಎಂದು ಲೋಕದ ಜನರು ತಿಳಿಯಲಿ. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಳುಹಿಸಿ ಈಗ ಇಸ್ಲಾಮನ್ನು ಮತ್ತೆ ಪುನಶ್ಚೇತನಗೊಳಿಸಿರುವುದನ್ನು ಹಾಗೂ ಇಸ್ಲಾಮಿನ ನೈಜ ತತ್ವಗಳನ್ನು ಪ್ರಚಾರ ಮಾಡುತ್ತಿರುವುದನ್ನು ಲೋಕವು ತಿಳಿಯಲಿ. ಅಲ್ಲಾಹನು ತನ್ನ ದಾಸರನ್ನು ಶೈತಾನನಿಂದ ರಕ್ಷಿಸಲು ತನ್ನ ಸಂದೇಶವಾಹಕರನ್ನು ಈಗಲೂ ಕಳುಹಿಸುತ್ತಾನೆ ಎಂದು ಲೋಕವು ತಿಳಿಯಲಿ ಎಂದು ನಾನು ಹೇಳಿದ್ದೆ. ಯಾವ ಜಮಾಅತುಗಳು ಈ ನಿಟ್ಟಿನಲ್ಲಿ ಕೆಲಸ ಮಾಡಿದುವೋ ಅವರು ಅಲ್ಲಾಹನ ಅನುಗ್ರಹದಿಂದ ಉತ್ತಮ ಪರಿಣಾಮ ಗಳಿಸಿದರು. ಸ್ಪೈನ್ ದೇಶಕ್ಕೆ ನಾನು ಜಾಮಿಅ ಅಹ್ಮದಿಯಾದ ವಿದ್ಯಾರ್ಥಿಗಳನ್ನು ಕಳುಹಿಸಿದ್ದೆ. ಅವರು ಅಲ್ಲಿ ಬಹಳ ಉತ್ತಮ ಕೆಲಸ ಮಾಡಿದರು. ಮೂರು ಲಕ್ಷದಷ್ಟು ಕಿರುಲೇಖನಗಳನ್ನು ಅವರು ಹಂಚಿದರು. ಇದೇ ರೀತಿ ಕೆನಡದ ಜಾಮಿಅ ಅಹ್ಮದಿಯಾದ ವಿದ್ಯಾರ್ಥಿಗಳು ಸ್ಪಾನಿಶ್ ದೇಶಗಳಲ್ಲಿ ಮತ್ತು ಮೆಕ್ಸಿಕೋ ದೇಶದಲ್ಲಿ ಕಿರು ಹೊತ್ತಗೆಗಳನ್ನು ಹಂಚಿದರು. ಆ ಮೂಲಕ ಅಲ್ಲಾಹನ ಅನುಗ್ರಹದಿಂದ ತಬ್ಲೀಗಿನ ಮೈದಾನ ವಿಶಾಲವಾಯಿತು. ಬೈಅತ್‌ಗಳು ಉಂಟಾದುವು.

ಆದುದರಿಂದ ಇದಕ್ಕೋಸ್ಕರ ಒಂದರ ನಂತರ ಇನ್ನೊಂದರಂತೆ ಎರಡು ಹಾಳೆಗಳ ಕಿರುಲೇಖನ ಪ್ರಕಟಗೊಳ್ಳುತ್ತಾ ಇರಬೇಕು. ಅವುಗಳನ್ನು ವ್ಯಾಪಕವಾಗಿ ಹಂಚುತ್ತಾ ಇರಬೇಕು. ದೊಡ್ಡ ದೊಡ್ಡ ಪುಸ್ತಕಗಳಿಗೆ ಬದಲಾಗಿ ಇಂತಹ ಚಿಕ್ಕ ಚಿಕ್ಕ ಲೇಖನಗಳನ್ನು ಪ್ರಕಟಿಸುತ್ತಾ ಇರಬೇಕು.

ನಾನೀಗ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಸಹಾಬರಿಗೆ ಸಂಬಂಧಿಸಿ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಂಬಂಧಿಸಿ ಪ್ರಸ್ತಾಪಿಸಿದ ಕೆಲವು ವಿಷಯಗಳನ್ನು ವಿವರಿಸುತ್ತೇನೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ''ಅಫ್‌ಗಾನಿಸ್ಥಾನದಲ್ಲಿ ಶಹೀದರಾದ ವ್ಯಕ್ತಿಗಳ ಮೇಲೆ ಶತ್ರುಗಳು ಕಲ್ಲೆಸೆಯುತ್ತಿದ್ದಾಗ ಆ ಶಹೀದರು ಗಾಬರಿಗೊಳ್ಳುತ್ತಿರಲಿಲ್ಲ. ಬದಲಾಗಿ ಅವರು ಸ್ಥಿರತೆಯಿಂದಲೂ ಧೈರ್ಯದಿಂದಲೂ ಕಲ್ಲೇಟನ್ನು ಅನುಭವಿಸುತ್ತಿದ್ದರು. ಅವರ ಮೇಲೆ ಬಹಳಷ್ಟು ಕಲ್ಲುಗಳು ರಭಸದಿಂದ ಬೀಳುತ್ತಿದ್ದಾಗ, ಸಾಹಿಬ್ ಝಾದ ಅಬ್ದುಲ್ಲತೀಫ್ ಸಾಹೇಬ್, ನಿಅ್‌ಮತುಲ್ಲಾ ಖಾನ್ ಸಾಹೇಬ್ ಮತ್ತು ಇತರ ಶಹೀದರು ಹೀಗೆ ಹೇಳುತ್ತಿದ್ದರು: 'ಓ ನಮ್ಮ ದೇವಾ, ಈ ಜನರ ಮೇಲೆ ದಯೆದೋರು, ಅವರಿಗೆ ಮಾರ್ಗದರ್ಶನ ನೀಡು' ಎಂದು ಹೇಳುತ್ತಿದ್ದರು. ನಿಜವೇನೆಂದರೆ ಜನರಲ್ಲಿ ದೇವ ಪ್ರೇಮದ ಭಾವನೆ ಇದ್ದರೆ ಇದೇ ರೀತಿ ಅವರು ವರ್ತಿಸುತ್ತಾರೆ. ಅಂತಹ ಜನರ ಮಾತುಗಳು ಪ್ರಭಾವಶಾಲಿಯಾಗಿರುತ್ತವೆ. ಅವರ ಮುಖಗಳಲ್ಲಿರುವ ಪ್ರಕಾಶ ಜನರನ್ನು ಆಕರ್ಷಿಸುತ್ತವೆ.''

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ''ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿ ಸಾವಿರಾರು ಜನರು ಖಾದಿಯಾನಿಗೆ ಬರುತ್ತಿದ್ದರು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನೇರವಾಗಿ ಕಂಡಾಗ ಹೇಳುತ್ತಿದ್ದರು– ಈ ಮುಖ ಸುಳ್ಳುಗಾರನದಾಗಲು ಸಾಧ್ಯವಿಲ್ಲ ಎಂದು. ಆ ಜನರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಂದ ಒಂದು ಶಬ್ದ ಸಹ ಆಲಿಸದೆ ಅವರನ್ನು ನಂಬಿದರು.''

ಈ ಉದಾಹರಣೆ ಇಂದಿನ ಕಾಲದಲ್ಲಿಯೂ ನಮಗೆ ಕಾಣಿಸುತ್ತದೆ. ನನಗೆ ಅನೇಕ ಪತ್ರಗಳು ಲಭಿಸಿವೆ. ಅದರಲ್ಲಿ ಪತ್ರ ಬರೆದವರು ಬರೆಯುತ್ತಾರೆ: ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಚಿತ್ರವನ್ನು ಕಂಡಾಗ ನಮಗೆ ಮನವರಿಕೆ ಆಯಿತು. ಈ ಮುಖ ಸುಳ್ಳುಗಾರನದಲ್ಲ ಎಂದು. ಹಾಗೆ ನಾವು ಬೈಅತ್ ಮಾಡಿದೆವು. ಎಂದು ಅವರು ಬರೆಯುತ್ತಾರೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಂದು ಕಡೆ ಹೀಗೆ ಹೇಳುತ್ತಾರೆ: ''ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು, ನಮ್ಮ ಜಮಾಅತ್‌ನಲ್ಲಿ ಮೂರು ವಿಧಗಳ ಜನರು ಇದ್ದಾರೆ ಎಂದು ಹೇಳುತ್ತಿದ್ದರು. ಒಂದು ಗುಂಪಿನ ಜನರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದುದು ಅವರ ವಾದಗಳನ್ನು ಚೆನ್ನಾಗಿ ಮನವರಿಕೆ ಮಾಡಿಕೊಂಡ ನಂತರವಾಗಿದೆ. ಹಿಂದಿನ ಕಾಲದಲ್ಲಿ ಆಗಮಿಸಿದ ಪ್ರವಾದಿಗಳನ್ನು ನಂಬಿದ ಜನರು ಅರ್ಪಿಸಿದ ಬಲಿದಾನಗಳ ಹಾಗೆಯೇ ನಾವು ಸಹ ಇಂದು ಬಲಿದಾನಗಳನ್ನು ಅರ್ಪಿಸಬೇಕೆಂದು ಅವರು ತಿಳಿದಿದ್ದರು. ಇನ್ನೊಂದು ವಿಧದ ಜನರು ಹಝ್ರತ್ ಮೌಲವಿ ನೂರುದ್ದೀನ್ ಸಾಹೇಬರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದ ಕಾರಣ ಜಮಾಅತಿನಲ್ಲಿ ಸೇರಿದವರಾಗಿದ್ದಾರೆ. ಅವರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನದ ಉದ್ದೇಶದ ಬಗ್ಗೆ ಸರಿಯಾದ ತಿಳುವಳಿಕೆ ಇರುವುದಿಲ್ಲ. ಮೌಲವಿ ನೂರುದ್ದೀನ್ ಸಾಹೇಬರು ಬೈಅತ್ ಮಾಡಿದ ಕಾರಣದಿಂದ ಮಾತ್ರ ಅವರು ಸಹ ಬೈಅತ್ ಮಾಡಿದ್ದಾರೆ. ಮೂರನೆಯ ಗುಂಪು ಯುವ ಜನರದ್ದಾಗಿದೆ. ಅವರಿಗೆ ಮುಸ್ಲಿಮರ ಬಗ್ಗೆ ಸಾಮುದಾಯಿಕ ನೋವು ಮಾತ್ರ ಇದೆ. ಮುಸ್ಲಿಮರ ಒಂದು ಸಂಘಟನೆ ಇರಬೇಕೆಂದು ಅವರು ಬಯಸಿದವರಾಗಿದ್ದಾರೆ. ಅವರಿಗೆ ಮುಸ್ಲಿಮರ ಧಾರ್ಮಿಕ ಸ್ಥಿತಿ ಬಗ್ಗೆ ನೋವಿರಲಿಲ್ಲ. ಅವರಿಗೆ ಮುಸ್ಲಿಮರ ದುರವಸ್ಥೆ ನೋಡಿ ಅವರ ಒಂದು ಸಂಘಟನೆ ಬೇಕೆಂದು ಬಯಸಿದರು. ಅವರಿಗೆ ಸ್ವತಃ ಸಂಘಟನೆ ರೂಪಿಸಲು ಸಾಧ್ಯವಿರಲಿಲ್ಲ. ಅವರು ನಮ್ಮ ಸಂಘಟನೆಯನ್ನು ನೋಡಿ ಅದರಲ್ಲಿ ಸೇರಿದರು. ಅಂತಹ ಜನರು ಬಯಸುವುದೇನೆಂದರೆ ವಿದ್ಯಾಲಯಗಳನ್ನು ತೆರೆಯಬೇಕು. ಜನರು ಬಿರುದು ಗಳಿಸುವಂತೆ ಮಾಡಬೇಕೆಂದು. ಇದೇ ಕಾರಣದಿಂದ ಅವರು ನಮ್ಮ ಜಮಾಅತನ್ನು ಒಂದು ಸಾಮುದಾಯಿಕ ಸಂಘಟನೆ (ಅಂಜುಮನ್) ಎಂದು ಮಾತ್ರ ಪರಿಗಣಿಸುತ್ತಾರೆ. ನಮ್ಮದು ಧಾರ್ಮಿಕ ಸಂಘಟನೆ ಎಂದು ಅವರು ಮನವರಿಕೆ ಮಾಡಿಲ್ಲ. ಆದರೆ, ಲೌಕಿಕ ಅಭಿವೃದ್ಧಿಯ ಮಾರ್ಗಗಳು ಬೇರೆಯೇ ಆಗಿವೆ. ಧಾರ್ಮಿಕ ಅಭಿವೃದ್ಧಿ ಮಾರ್ಗಗಳು ಸಂಪೂರ್ಣವಾಗಿ ಅವುಗಳಿಂದ ಭಿನ್ನವಾಗಿವೆ. ಸಾಮುದಾಯಿಕ

ಸಂಘಟನೆಗಳು ಅಭಿವೃದ್ಧಿ ಹೊಂದುವ ರೀತಿ ಬೇರೆಯಾಗಿದೆ. ಧಾರ್ಮಿಕ ಅಭಿವೃದ್ಧಿ ಬೇರೆಯೇ ರೀತಿಯಲ್ಲಿ ಸಂಭವಿಸುತ್ತದೆ. ಧರ್ಮದ ಅಭಿವೃದ್ಧಿಗೆ ಅತ್ಯಾವಶ್ಯಕವಾಗಿರುವುದು ಉತ್ತಮ ನೈತಿಕ ಗುಣಗಳು ಆಗಿವೆ. ಬಲಿದಾನದ ಮನೋಭಾವ ಉಂಟಾಗಬೇಕು. ನಿಷ್ಠೆಯಿಂದ ನಮಾಝ್ ಅನುಷ್ಠಿಸಬೇಕು. ಆ ಮೂಲಕ ಆಧ್ಯಾತ್ಮಿಕ ಅಭಿವೃದ್ಧಿ ಉಂಟಾಗಬೇಕು. ರಮಝಾನ್ ತಿಂಗಳ ಉಪವಾಸ ಅನುಷ್ಠಿಸಬೇಕು. ಅಲ್ಲಾಹನ ಮೇಲೆ ಭರವಸೆ ಇಡಬೇಕು. ಅಲ್ಲಾಹನನ್ನು ಅನುಸರಿಸುವ ಪ್ರತಿಜ್ಞೆ ಮಾಡಬೇಕು. ಹೀಗೆಲ್ಲಾ ಮಾಡಿದರೆ ಲೋಕದ ದೃಷ್ಟಿಯಲ್ಲಿ ನಾವು ಹುಚ್ಚರೆಂದು ಗಣಿಸಲ್ಪಟ್ಟರೂ ಅಲ್ಲಾಹನ ದೃಷ್ಟಿಯಲ್ಲಿ ನಮಗಿಂತ ಬುದ್ಧಿವಂತರು ಬೇರೆ ಯಾರೂ ಇಲ್ಲ. ಇದೇ ಕಾರಣದಿಂದ ಈ ಎಲ್ಲಾ ರೀತಿಯ ಉನ್ನತ ಸ್ವಭಾವ ಗುಣಗಳು ಮತ್ತು ಆಧ್ಯಾತ್ಮಿಕ ಅಭಿವೃದ್ಧಿ ಧಾರ್ಮಿಕ ಜಮಾಅತ್‌ಗಳಲ್ಲಿರಬೇಕಾದುದು ಅನಿವಾರ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ಅಹ್ಮದಿ ತನ್ನ ಪ್ರಾಮಾಣಿಕತೆಯ ಮಟ್ಟವನ್ನು ಮತ್ತು ಆಧ್ಯಾತ್ಮಿಕತೆಯ ಮಟ್ಟವನ್ನು ಬಹಳ ಉನ್ನತಗೊಳಿಸಬೇಕಾದುದು ಆವಶ್ಯಕವಾಗಿದೆ.''

ಖಾದಿಯಾನ್‌ನಲ್ಲಿ ತಅ್‌ಲೀಮುಲ್ ಇಸ್ಲಾಮ್ ಹೈಸ್ಕೂಲಿನ ಆವಶ್ಯಕತೆ ಮತ್ತು ಅದರ ಸ್ಥಾಪನೆಯ ಹಿನ್ನೆಲೆಯನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ''ನಾವು ತಅ್‌ಲೀಮುಲ್ ಇಸ್ಲಾಮ್ ಕಾಲೇಜು ಪ್ರಾರಂಭಿಸಿದಾಗ, ಈಗ ಕೂಡಲೇ ನಮಗೆ ಇಷ್ಟು ಲಕ್ಷ ರೂಪಾಯಿಗಳು ಬೇಕು, ವಾರ್ಷಿಕ ಖರ್ಚಿಗೆ ಇಷ್ಟು ಲಕ್ಷ ರೂಪಾಯಿಗಳು ಬೇಕು ಎಂದೆಲ್ಲಾ ಲಕ್ಷಗಟ್ಟಲೆ ರೂಪಾಯಿಗಳ ಲೆಕ್ಕ ಹಾಕಲಾಗುತ್ತಿತ್ತು. ಆದರೆ ಹಿಂದೆ ನಮಗೆ ಹೈಸ್ಕೂಲು ಪ್ರಾರಂಭಿಸಲು ಸಹ ಬಹಳ ಕಷ್ಟವಾಗಿದ್ದ ಕಾಲ ಇತ್ತು. ಆಗ ಇಲ್ಲಿ ಆರ್ಯ ಸಮಾಜದ ಒಂದು ಮಿಡ್ಲ್ ಸ್ಕೂಲ್ ಇತ್ತು. ಆ ಶಾಲೆಗೆ ನಮ್ಮ ಹುಡುಗರು ಕಲಿಯಲು ಹೋದಾಗ ಅಲ್ಲಿನ ಅಧ್ಯಾಪಕರು ಭಾಷಣ ನೀಡುತ್ತಿದ್ದರು. ನೀವು ಮಾಂಸ ತಿನ್ನಬಾರದು. ಹಿಂದುಗಳು ಮಾಂಸ ತಿನ್ನುವುದಿಲ್ಲ. ಮಾಂಸ ತಿನ್ನುವುದು ಅಕ್ರಮ ಕೃತ್ಯವಾಗಿದೆ. ಇಂತಹ ಆಕ್ಷೇಪಮಾಡಿ ಇಸ್ಲಾಮನ್ನು ಆಕ್ರಮಣ ಮಾಡುತ್ತಿದ್ದರು. ಹುಡುಗರು ಶಾಲೆಯಿಂದ ಬಂದು ಈ ಆಕ್ಷೇಪಗಳನ್ನು ಮನೆಯಲ್ಲಿ ಹೇಳುತ್ತಿದ್ದರು. ಇಲ್ಲೊಂದು ಪ್ರೈಮರಿ ಶಾಲೆ ಸಹ ಇತ್ತು. ಅದರ ಬಹುತೇಕ ಅಧ್ಯಾಪಕರೂ ಆರ್ಯ ಸಮಾಜದವರೇ ಆಗಿದ್ದರು. ಅಲ್ಲಿ ಸಹ ಮೇಲಿನಂತೆ ಅಧ್ಯಾಪಕರು ಹೇಳುತ್ತಿದ್ದರು. ನಾನು ಸರಕಾರಿ ಪ್ರೈಮರಿ ಶಾಲೆಯಲ್ಲಿ ಕಲಿಯಲು ಹೋದಾಗ ನನ್ನ ಮಧ್ಯಾಹ್ನದ ಊಟ ಮನೆಯಿಂದ ತಂದಿದ್ದರು. ನಾನು ಶಾಲೆಯಿಂದ ಹೊರಗೆ ಒಂದು ಮರದ ಕೆಳಗೆ ಕುಳಿತು ಊಟಮಾಡಲು ಕುಳಿತಿದ್ದೆ. ನನಗೆ ಖಲೀಜದ (ಲಿವರ್) ಸಾರು ಕಳುಹಿಸಿದ್ದರು. ಅಲ್ಲಿಗೆ ನಮ್ಮ ಶಾಲೆಯಲ್ಲಿ ನನಗಿಂತ ಮೇಲಿನ ತರಗತಿಯಲ್ಲಿ ಕಲಿಯುತ್ತಿದ್ದ ಮಿಯಾಂ ಉಮರುದ್ದೀನ್ ಸಾಹೇಬರು ಬಂದು ನನ್ನ ಆಹಾರ ನೋಡಿ ಹೇಳಿದರು. 'ಮಾಂಸ ತಿನ್ನುತ್ತಿರುವೆಯಲ್ಲಾ ಮಾಂಸವನ್ನು' ಎಂದು ಹೇಳಿದರು. ಅವರು ಸಹ ಮುಸ್ಲಿಮರಾಗಿದ್ದರು. ಆದರೆ ಆರ್ಯ ಸಮಾಜಿಗಳಾದ ಅಧ್ಯಾಪಕರು ಅವರಿಗೆ ಮಾಂಸ ತಿನ್ನುವುದು ಬಹಳ ಕೆಟ್ಟ ಕೆಲಸ ಎಂದು ಕಲಿಸಿದ್ದರು.''

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ''ನಾನು 1944ರಲ್ಲಿ ಕಾಲೇಜಿನ ಅಸ್ತಿಭಾರ ಹಾಕಿದೆ. ನಮ್ಮ ಜಮಾಅತಿನ ಮುಂದಿನ ಪೀಳಿಗೆಯು ಉನ್ನತ ವಿದ್ಯಾಭ್ಯಾಸ ನಮ್ಮ ಕೈಯಲ್ಲಿ ಇರಲಿ ಎಂದು ನಾನು ಬಯಸಿದೆ. ಆ ಕಾಲದಲ್ಲಿ ನಮ್ಮ ಜಮಾಅತಿನಲ್ಲಿ ಚಿಕ್ಕ ಸರಕಾರಿ ಹುದ್ದೇದಾರರು ಮತ್ತು ಕಡಿಮೆ ಆದಾಯ ಹೊಂದಿದವರು ಮಾತ್ರ ಇದ್ದರು. ಇದರಿಂದ ಜಮಾಅತಿನ ಚರಿತ್ರೆ ಸಹ ಸ್ಪಷ್ಟವಾಗುತ್ತದೆ. ನಿಸ್ಸಂಶಯವಾಗಿ ಕಾಲೇಜಿನಲ್ಲಿ ವ್ಯಾಸಾಂಗ ಮಾಡಿದ ಕೆಲವರು ಜಮಾಅತಿನಲ್ಲಿ ಸೇರಿದರು. ಆದರೆ ಅವರು ಆಕಸ್ಮಿಕವಾಗಿ ಸೇರಿದವರಾಗಿದ್ದರು. ಉನ್ನತ ಸರಕಾರಿ ಹುದ್ದೇದಾರರೂ ಉನ್ನತ ಆದಾಯ ಹೊಂದಿದವರೂ ನಮ್ಮ ಜಮಾಅತಿನಲ್ಲಿರಲಿಲ್ಲ. ಕೆಲವೇ ಕೆಲವು ಜನರ ಹೊರತು. ಇದು ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆಯ ಸಾಕ್ಷ್ಯವಾಗಿದೆ. ನಮ್ಮ ಜಮಾಅತಿನಲ್ಲಿ ದೊಡ್ಡ ಮನುಷ್ಯರು ಸೇರಿರಲಿಲ್ಲ ಎಂಬುದು. ಅಸಿಸ್ಟೆಂಟ್ ಕಮಿಶನರ್ ಹುದ್ದೆ ಹೊಂದಿದ್ದ ವ್ಯಕ್ತಿ ಸಹ ನಮ್ಮ ಜಮಾಅತಿನಲ್ಲಿ ಇರಲಿಲ್ಲ. ಆ ಕಾಲದಲ್ಲಿ ಅಸಿಸ್ಟೆಂಟ್ ಕಮಿಶನರ್ ಹುದ್ದೆ ಬಹಳ ಉನ್ನತ ಹುದ್ದೆಯಾಗಿತ್ತು. ಆದರೆ ಈಗ ನೋಡಿರಿ ಅನೇಕ ಅಸಿಸ್ಟಂಟ್ ಕಮಿಶನರುಗಳು ನಮ್ಮ ಗಲ್ಲಿಗಳಲ್ಲಿ ತಿರುಗಾಡುತ್ತಾ ಇದ್ದಾರೆ. ಅವರ ಕಡೆಗೆ ಯಾರೂ ಕಣ್ಣೆತ್ತಿ ಸಹ ನೋಡುವುದಿಲ್ಲ. ಒಂದು ಕಾಲದಲ್ಲಿ ನಮ್ಮ ಜಮಾಅತಿನಲ್ಲಿ ಉನ್ನತ ಹುದ್ದೇದಾರರು ಬಹಳ ಕಡಿಮೆ ಇದ್ದರು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಹೇಳುತ್ತಿದ್ದರು ನಮ್ಮ ಜಮಾಅತಿನಲ್ಲಿ ದೊಡ್ಡ ಜನರಿಲ್ಲ. ಆ ಕಾಲದಲ್ಲಿ ಒಬ್ಬ ಅಸಿಸ್ಟೆಂಟ್ ಕಮಿಶನ್ ಹುದ್ದೇದಾರ ಸಹ ನಮ್ಮ ಜಮಾಅತಿನಲ್ಲಿರಲಿಲ್ಲ.''

ಇಂದಿನ ಕಾಲದಲ್ಲಿ ಅಲ್ಲಾಹನ ಅನುಗ್ರಹದಿಂದ ಲೋಕದಲ್ಲಿ ನೂರಾರು ಶಾಲೆಗಳನ್ನು ಕಾಲೇಜುಗಳನ್ನೂ ನಮ್ಮ ಜಮಾಅತ್ ನಡೆಸುತ್ತಾ ಇದೆ. ವಿವಿಧ ದೇಶಗಳಲ್ಲಿ ದೊಡ್ಡ ದೊಡ್ಡ ತಜ್ಞರೂ ಸರಕಾರಿ ಅಧಿಕಾರಿಗಳೂ ನಮ್ಮ ಜಮಾಅತಿನಲ್ಲಿದ್ದಾರೆ. ಕೆಲವು ದೇಶಗಳಲ್ಲಿ ಪಾರ್ಲಿಮೆಂಟ್ ಸದಸ್ಯರೂ ಅಹ್ಮದಿಯರಾಗಿದ್ದಾರೆ. ಅವರು ನಿಷ್ಠಾವಂತ ಅಹ್ಮದಿಯರಾಗಿದ್ದಾರೆ. ಆಫ್ರಿಕದ ಕೆಲವು ದೇಶಗಳಲ್ಲಿ ಅಹ್ಮದಿ ಸಚಿವರೂ ಇದ್ದಾರೆ. ಅಲ್ಲಾಹನ ಅನುಗ್ರಹಗಳಲ್ಲಿ ಇದು ಸಹ ಒಂದು ಅನುಗ್ರಹವಾಗಿದೆ. ಅಲ್ಲಾಹನು ಹೇಗೆ ಅಭಿವೃದ್ಧಿ ನೀಡುತ್ತಾನೆಂದು ನೋಡಿರಿ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಆರಂಭ ಕಾಲದ ಅಹ್ಮದಿಯರ ಮೇಲೆ ನಡೆದ ದೌರ್ಜನ್ಯ ಮತ್ತು ಅನಂತರ ಅಲ್ಲಾಹನಿಂದ ಉಂಟಾದ ಅನುಗ್ರಹದ ಬಗ್ಗೆ ವಿವರಿಸುತ್ತಾ ಹೀಗೆ ಹೇಳುತ್ತಾರೆ:

ಒಂದು ಕಾಲದಲ್ಲಿ ಅಹ್ಮದಿಯಾ ಜಮಾಅತಿನ ವಿರುದ್ಧ ನಾಲ್ಕು ದಿಕ್ಕುಗಳಿಂದಲೂ ಆಕ್ರಮಣ ನಡೆಯುತ್ತಿತ್ತು. ಮೌಲವಿಗಳು ಫತ್ವ ಹೊರಡಿಸಿದ್ದರು. ಅಹ್ಮದಿಯರನ್ನು ಕೊಲ್ಲುವುದು ಅವರ ಮನೆಗಳನ್ನು ಲೂಟಿ ಮಾಡುವುದು ಅವರ ಸ್ವತ್ತುಗಳನ್ನು ಕಿತ್ತುಕೊಳ್ಳುವುದು ಅವರ ವಿವಾಹಿತ ಮಹಿಳೆಯರನ್ನು ತಲಾಖ್ ಪಡೆಯದೆ ಬೇರೆ ಕಡೆ ವಿವಾಹ

ಮಾಡಿಕೊಡುವುದು ಇತ್ಯಾದಿ ಅನುಮತಿಸಲ್ಪಟ್ಟುದ್ದು ಮಾತ್ರವಲ್ಲ ಪುಣ್ಯದಾಯಕವೂ ಆಗಿದೆ ಎಂದು ಹೇಳುತ್ತಿದ್ದರು. ಬೆಳಗಾಗುವ ಪ್ರತಿದಿನ ಅದರೊಂದಿಗೆ ಹೊಸ ಹೊಸ ಪರೀಕ್ಷೆಗಳನ್ನೂ ಹೊಣೆಗಾರಿಕೆಗಳನ್ನೂ ತರುತ್ತಿತ್ತು. ಪ್ರತಿಯೊಂದು ಸಂಜೆ ಅದರೊಂದಿಗೆ ಹೊಸ ಪರೀಕ್ಷೆಗಳನ್ನು ಹೊಸ ಹೊಣೆಗಾರಿಕೆಗಳನ್ನು ತರುತ್ತಿತ್ತು. ಆದರೆ **ಅಲೈಸಲ್ಲಾಹು ಬಿಕಾಫಿನ್ ಅಬ್‌ದಹೂ** (ಏನು ಅಲ್ಲಾಹನು ಅವನ ದಾಸನಿಗೆ ಸಾಕಾಗಲಾರನೆ) ಎಂಬ ತಂಗಾಳಿ ಎಲ್ಲ ಚಿಂತೆಗಳನ್ನು ಕಸಕಡ್ಡಿಗಳ ಹಾಗೆ ಹಾರಿಸಿ ದೂರಕ್ಕೆಸೆಯುತ್ತಿತ್ತು. ಜಮಾಅತಿನ ಕಟ್ಟಡವನ್ನು ಕೆಡವಿ ಹಾಕುವುದಾಗಿ ಬೆದರಿಕೆ ಒಡ್ಡುತ್ತಿದ್ದ ಕಾರ್ಮೋಡಗಳು ಅಲ್ಲಾಹನ ಅನುಗ್ರಹದಿಂದ ಸ್ವಲ್ಪವೇ ಕಾಲದ ನಂತರ ಅನುಗ್ರಹದ ಮಳೆ ಸುರಿಸುತ್ತಿತ್ತು. ಅದರ ಒಂದೊಂದು ಹನಿ ಬೀಳುತ್ತಿರುವಾಗ **ಅಲೈಸಲ್ಲಾಹು ಬಿಕಾಫಿನ್ ಅಬ್‌ದಹೂ** ಎಂಬ ಧೈರ್ಯ ನೀಡುವ ಧ್ವನಿ ಮೊಳಗುತ್ತಿತ್ತು. ಎಂದರೆ ಎಷ್ಟು ಕಷ್ಟವಿದ್ದರೂ ನಮಗೆ ದೃಢ ವಿಶ್ವಾಸವಿತ್ತು, ಅಲ್ಲಾಹನು ನಮಗೆ ಸಾಕು ಎಂದು. إِنْ شَاءَ اللهُ ಪರಿಸ್ಥಿತಿ ಬದಲಾಗುವುದು ಎಂಬ ಭರವಸೆ ಇತ್ತು.''

ಈಗ ಸಹ ಕೆಲವು ಕಷ್ಟಗಳು ಸಂಭವಿಸುತ್ತಾ ಇದ್ದರೂ **ಅಲೈಸಲ್ಲಾಹು ಬಿಕಾಫಿನ್ ಅಬ್‌ದಹೂ** ಎಂಬ ಶಬ್ದ ನಮಗೆ ಆಶ್ವಾಸನೆ ನೀಡುತ್ತದೆ. ಅದು ನಮ್ಮ ಆಶ್ರಯವಾಗಿದೆ. ಲೋಕದ ಮೂಲೆ ಮೂಲೆಗಳಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಲಂಗರ್ (ಭೋಜನ ಶಾಲೆ) ಸ್ಥಾಪಿತವಾಗಿವೆ. ಅಲ್ಲಾಹನು ನಮ್ಮನ್ನು ಎಂದೂ ಕೈಬಿಟ್ಟಿಲ್ಲ. ಇನ್ನು ಮುಂದೆ ಸಹ ನಮ್ಮ ಕೈಬಿಡಲಾರನು– إِنْ شَاءَ اللهُ. ನಾವು ಅವನೊಂದಿಗೆ ಅಂಟಿಕೊಂಡಿರಬೇಕು. ಬಲಿದಾನಗಳನ್ನು ನೀಡುತ್ತಿರಬೇಕು. ಅಹ್ಮದಿಯರು ಅಲ್ಲಾಹನ ಅನುಗ್ರಹದಿಂದ ಬಲಿದಾನ ನೀಡುತ್ತಾ ಇದ್ದಾರೆ. ಆದರೆ ಪ್ರತಿಯೊಂದು ಬಲಿದಾನ ಅಲ್ಲಾಹನ ಅನುಗ್ರಹದ ಒಂದು ಹೊಸ ಮಾರ್ಗವನ್ನು ನಮಗೆ ತೋರಿಸುತ್ತದೆ. ಅಲ್ಲಾಹನು ತನ್ನ ಅನುಗ್ರಹಗಳನ್ನು ಎಂದೂ ಕಡಿಮೆಗೊಳಿಸುವುದಿಲ್ಲ.

ಅಲ್ಲಾಹನು ಸಂರಕ್ಷಣೆಯ ಅದ್ಭುತ ಕೃತ್ಯ ತೋರಿಸಿದ ಬಗ್ಗೆ ಒಂದು ಸಂಭವವನ್ನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ವಿವರಿಸುತ್ತಾರೆ: ''ಲಾಹೋರಿನ ಲಾ ಕಾಲೇಜಿನ ಪ್ರಿನ್ಸಿಪಾಲ್ ಕುಮಾರ್ ಸೇನ್‌ರವರ ಪಿತ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಬಹಳ ನಿಕಟ ಸಂಬಂಧ ಹೊಂದಿದ್ದರು. ಅವರು ಕೆಲವು ಸಾರಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಾಲ ಸಹ ಕೊಡುತ್ತಿದ್ದರು. ಕುಮಾರ್ ಸೇನ್ ಮತ್ತು ಅವರ ಪಿತ ಹಿಂದುವಾಗಿದ್ದರು. ಜಿಹಲಮ್‌ನಲ್ಲಿ ಮೊಕದ್ದಮೆ ನಡೆಯುತ್ತಿದ್ದಾಗ ಕುಮಾರ್ ಸೇನರ ತಂದೆ ತನ್ನ ಮಗನಿಗೆ ತಂತಿ ಸಂದೇಶ ನೀಡಿ ಹಝ್ರತ್ ಮಸೀಹ್ ಮೌಊದ್ ಪರವಾಗಿ ನ್ಯಾಯಾಲಯದಲ್ಲಿ ವಾದಿಸಲು ಹೇಳಿದ್ದರು. ಕುಮಾರ್ ಸೇನರ ತಂದೆಯವರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಭಕ್ತಿಭಾವನೆ ಇತ್ತು. ಏಕೆಂದರೆ ಅವರು ಸಿಯಾಲ್‌ಕೋಟ್‌ನಲ್ಲಿ ಅನೇಕ ದೃಷ್ಟಾಂತಗಳನ್ನು ಕಂಡಿದ್ದರು. ಅವುಗಳಲ್ಲಿ ಒಂದು ಹೀಗಿದೆ:

ಒಂದು ರಾತ್ರಿ ಕುಮಾರ್ ಸೇನರ ಪಿತ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಮ್ಮ ಇತರ ಕೆಲವು ಸ್ನೇಹಿತರೊಂದಿಗೆ ನಿದ್ರಿಸುತ್ತಿದ್ದಾಗ ಪಕ್ಕನೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಎಚ್ಚರವಾಯಿತು. ತಾವು ನಿದ್ರಿಸುತ್ತಿದ್ದ ಕಟ್ಟಡ ಅಪಾಯದಲ್ಲಿದೆ ಎಂದು ಅವರಿಗೆ ಭಾಸವಾಯಿತು. ಅವರು ಎಲ್ಲರನ್ನೂ ಎಬ್ಬಿಸಿ ಕಟ್ಟಡ ಅಪಾಯದಲ್ಲಿದೆ ಹೊರಗೆ ಹೋಗಬೇಕೆಂದು ಹೇಳಿದಾಗ ಸ್ನೇಹಿತರು ನಿಮಗೆ ಸುಮ್ಮನೆ ಸಂಶಯ ತೋರಿದೆ ಎಂದು ಹೇಳಿ ನಿದ್ರಿಸಲು ತೊಡಗಿದರು. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆತಂಕ ವರ್ಧಿಸುತ್ತಿತ್ತು. ಅವರು ಪುನಃ ಜನರನ್ನು ಎಬ್ಬಿಸಿದರೂ ಅವರು ಹೊರಗೆ ಹೋಗಲು ಒಪ್ಪಲಿಲ್ಲ. ಕೊನೆಗೆ ಅವರನ್ನು ಬಹಳ ನಿರ್ಬಂಧಿಸಿದಾಗ ಅವರು ಹೊರಗೆ ಹೋಗಲು ಒಪ್ಪಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ದೃಢ ವಿಶ್ವಾಸವಿತ್ತು. ನನ್ನ ಕಾರಣದಿಂದಲೇ ಮನೆ ಕುಸಿಯದೆ ಬಾಕಿಯಾಗಿದೆ ಎಂದು. ಆದುದರಿಂದ ಅವರು ಎಲ್ಲರನ್ನೂ ಹೊರಗೆ ಕಳುಹಿಸಿ ಕೊನೆಗೆ ತಾನು ಮನೆಯಿಂದ ಹೊರಗೆ ಕಾಲಿರಿಸಿದರು. ಅವರು ಹೊರಗೆ ಕಾಲಿರಿಸಿದ ಕೂಡಲೆ ಛಾವಣಿ ಕುಸಿದು ಬಿತ್ತು.

ಅದ್ಭುತಕರವಾದ ಇನ್ನೊಂದು ಸಂಭವ ಹೀಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಒಮ್ಮೆ ಅಮೃತಸರದಿಂದ ನಾನು ಒಂದು ಎಕ್ಕ ಬಂಡಿಯಲ್ಲಿ ಒಬ್ಬ ಹಿಂದುವಿನೊಂದಿಗೆ ಹೊರಟಿದ್ದೆ. ಆ ವ್ಯಕ್ತಿ ಬಹಳ ದಪ್ಪಗೆ ಇದ್ದು ಆತನು ಮುಂದಿನ ಸೀಟಿನಲ್ಲೂ ತನ್ನ ಕಾಲು ಇರಿಸಿ ನನಗೆ ಕುಳಿತುಕೊಳ್ಳಲು ಕಷ್ಟವಾಗುವಂತೆ ಮಾಡಿದ್ದನು. ಇರುವ ಜಾಗದಲ್ಲಿ ನಾನು ಬಹಳ ಪ್ರಯಾಸದಿಂದ ಕುಳಿತೆ. ಆಗ ಬಿಸಿಲು ಬಹಳ ಜೋರಾಗಿತ್ತು. ನನ್ನನ್ನು ಬಿಸಿಲಿನಿಂದ ರಕ್ಷಿಸಲು ಅಲ್ಲಾಹನು ಒಂದು ಮೋಡದ ನೆರಳನ್ನು ನನ್ನ ಎಕ್ಕ ಬಂಡಿಯೊಂದಿಗೆ ನೆರಳು ನೀಡುವಂತೆ ಮಾಡಿದನು. ಅದು ಬಟಾಲದವರೆಗೂ ನಮಗೆ ನೆರಳು ನೀಡಿತು. ಈ ದೃಶ್ಯ ನೋಡಿ ಆ ಹಿಂದು ಹೇಳಿದನು: ನೀವು ದೇವ ಸಾಮೀಪ್ಯ ಹೊಂದಿದ ಓರ್ವ ಮಾನ್ಯ ವ್ಯಕ್ತಿ ಎಂದು ತೋರುತ್ತದೆ.

ಅಲ್ಲಾಹನು ತನ್ನ ದಾಸರೊಂದಿಗೆ ಹೇಗೆ ವರ್ತಿಸುತ್ತಾನೆಂದರೆ ಅದು ಆಶ್ಚರ್ಯಕರವಾಗಿದೆ. ಆದರೆ ಅದಕ್ಕೆ ಅಲ್ಲಾಹನ ದಾಸತ್ವ ಸ್ವೀಕರಿಸುವುದು ನಿಬಂಧನೆಯಾಗಿದೆ. ಲೋಕದ ದೃಷ್ಟಿಯಲ್ಲಿ ಕೀಳಾಗಿ ಕಂಡರೂ ಅವರಿಗೆ ಅಲ್ಲಾಹನಿಂದ ಗೌರವ ಸಿಗುವುದು. ಅವರ ಹೆಸರು ಕೆಡಿಸಿದರೂ ಕೊನೆಗೆ ಅವರಿಗೆ ಒಳ್ಳೆಯ ಹೆಸರು ಸಿಗುವುದು. ಅಲ್ಲಾಹನನ್ನು ಆರಾಧಿಸಿದರೆ ಆರಾಧಿಸುವ ಭಕ್ತನಿಗೆ ಅಲ್ಲಾಹನು ನೆರವು ನೀಡುತ್ತಾನೆ. ಪ್ರತಿಯೊಂದು ಕೆಡುಕಿನಿಂದ ಅವರನ್ನು ರಕ್ಷಿಸುತ್ತಾನೆ.

ಓರ್ವ ಸಂತ ಆಗಿದ್ದ ಹಝ್ರತ್ ಮುನ್‌ಶೀ ಅಹ್ಮದ್ ಜಾನ್ ಸಾಹೇಬರ ಬಗ್ಗೆ ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ''ಹಝ್ರತ್ ಮುನ್‌ಶೀ ಅಹ್ಮದ್ ಜಾನ್ ಸಾಹೇಬರು ಮಸೀಹ್ ಮೌಊದ್ ಅಲೈಹಿಸ್ಸಲಾಮರ ದೇವ ನಿಯುಕ್ತ ವಾದದ ಮೊದಲೇ ಮರಣ ಹೊಂದಿದ್ದಾರೆ. ಆದರೆ, ಅವರ

ಪರಿಶುದ್ಧವಾದ ದಿವ್ಯ ದೃಷ್ಟಿ ಎಷ್ಟು ತೀವ್ರವಾಗಿತ್ತೆಂದರೆ, ಅವರು ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಾದದ ಮೊದಲೇ ಅವರಿಗೆ ಈರೀತಿ ಬರೆದರು:

**ಹಮ್ ಮರೀಝೋಂಕಿ ಹೈ ತುಮ್‌ಹೀ ಪೆ ನಿಗಾಹ್**
**ತುಮ್ ಮಸೀಹಾ ಬನೋ ಖುದಾಕೆಲಿಯೇ**

(ರೋಗಿಗಳಾದ ನಮ್ಮ ದೃಷ್ಟಿ ನಿಮ್ಮ ಮೇಲೆ ಮಾತ್ರವಿದೆ. ನೀವು ನಮ್ಮ ಚಿಕಿತ್ಸಕರಾಗಿರಿ– ಅಲ್ಲಾಹನಿಗೋಸ್ಕರ.)"

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಅಲ್ಲಾಹನು ಯಾವ ಕೆಲಸಕ್ಕೋಸ್ಕರ ನನ್ನನ್ನು ನೇಮಿಸಿದ್ದಾನೋ ಅದು ಇದಾಗಿದೆ– ಅಲ್ಲಾಹನು ಮತ್ತು ಅವನ ಸೃಷ್ಟಿಯ ಮಧ್ಯೆ ಇರುವ ಸಂಬಂಧದಲ್ಲಿ ತಲೆದೋರಿರುವ ಕಲ್ಮಶಗಳನ್ನು ದೂರ ಸರಿಸಿ ಪ್ರೀತಿ ಮತ್ತು ನಿಷ್ಠೆಯ ಸಂಬಂಧವನ್ನು ಪುನಃ ನಾನು ಸ್ಥಾಪಿಸಬೇಕು. ಲೋಕದ ಕಣ್ಣುಗಳಿಂದ ಮರೆಯಾಗಿರುವ ಧಾರ್ಮಿಕ ಸತ್ಯಗಳನ್ನು ನಾನು ಪ್ರಕಟಿಸಬೇಕು. ಸ್ವಾರ್ಥ ಹಿತಾಸಕ್ತಿಯ ಅಂಧಕಾರದಲ್ಲಿ ದಬ್ಬಲ್ಪಟ್ಟಿರುವ ಆಧ್ಯಾತ್ಮಿಕತೆಯ ನಮೂನೆಯನ್ನು ನಾನು ತೋರಿಸಬೇಕು. ಎಲ್ಲದಕ್ಕಿಂತ ಮುಖ್ಯವಾಗಿ, ಶುದ್ಧವಾದ ಮತ್ತು ಹೊಳಪುಳ್ಳ ಏಕದೇವ ವಿಶ್ವಾಸವನ್ನು ಬಹುದೇವಾರಾಧನೆಯ ಕೊಳೆಯಿಂದ ಮುಕ್ತಗೊಳಿಸಿ ಸಮಾಜದಲ್ಲಿ ಸ್ಥಾಪಿಸಲಿಕ್ಕಾಗಿ ನಾನು ನಿಯೋಜಿಸಲ್ಪಟ್ಟಿರುವೆನು."

ನಾವು ನಮ್ಮ ಬೈಅತ್ ಶರ್ತಗಳನ್ನು ಈಡೇರಿಸಿ ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸುವವರಾಗಲು ಅಲ್ಲಾಹನು ನಮಗೆ ಭಾಗ್ಯ ನೀಡಲಿ. ಧಾರ್ಮಿಕ ಸತ್ಯಗಳನ್ನು ಗುರುತಿಸಿ ಅನುಷ್ಠಾನಕ್ಕೆ ತಂದು ಆಧ್ಯಾತ್ಮಿಕತೆಯಲ್ಲಿ ಅಭಿವೃದ್ಧಿ ಹೊಂದುವಂತಾಗಲಿ. ಏಕದೇವ ವಿಶ್ವಾಸದ ಬೆಳಕಿನಿಂದ ಪಾಲು ಪಡೆಯುವಂತಾಗಲಿ. ಲೋಕದ ಜನರು ಸಹ ಅದನ್ನು ಗುರುತಿಸುವಂತೆ ಅಲ್ಲಾಹನು ಮಾಡಲಿ. ಮುಸ್ಲಿಮರಿಗೆ ಈ ಭಾಗ್ಯ ದೊರಕಲಿ. ಅವರು ಮಸೀಹ್ ಮೌಊದ್ ಅಲೈಹಿಸ್ಸಲಾಮರ ನೋವನ್ನು ಅರ್ಥ ಮಾಡಿಕೊಂಡು ಅವರನ್ನು ಬೈಅತ್ ಮಾಡುವವರಾಗಲಿ– ಆಮೀನ್.

ನುಅ್‌ಮಾನ್ ಅಹ್ಮದ್ ಅಂಜುಮ್ ಸಾಹಿಬ್ ಅವರನ್ನು ಕರಾಚಿಯಲ್ಲಿ 21–3–2015ರಂದು ಶಹೀದರನ್ನಾಗಿ ಮಾಡಲಾಗಿತ್ತು. إِنَّا لِلّٰهِ وَإِنَّا إِلَيْهِ رَاجِعُونَ. ಫಾರೂಖ್ ಅಹ್ಮದ್ ಖಾನ್ ಸಾಹಿಬ್ ಒಂದು ಅಪಘಾತದಲ್ಲಿ ಮೃತರಾದರು. إِنَّا لِلّٰهِ وَإِنَّا إِلَيْهِ رَاجِعُونَ. ಇವರಿಬ್ಬರ ಸದ್ಗುಣಗಳನ್ನು ವಿವರಿಸಿ ಅವರಿಬ್ಬರ ನಮಾಝೆ ಜನಾಝ ಗಾಯಿಬ್ ಅನುಷ್ಠಿಸಲಾಯಿತು.

--------------*****--------------

*Friday Sermon delivered by Hadrath Khaleefatul Masih Al Khamis(atba)*
*at Masjid Baithul Futhuh, London on 27-03-2015.*
Summarized by *Nazarath Nashr-o-Isha'at,Qadia*
***Kannada Translation:*** M Ubeidullah for Kannada Desk, Qadian
***Reviewed by:*** M P Ibrahim | ***Typing:*** U Basheer Ahmad
*Published By:* **Kannada Isha'at Team** for **Nazarath Nashr-O-Isha'ath, Qadian**
***Email***: *khutuba.kannada@gmail.com*